ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್.213/2024

| | | |
|---|---|---|
| ಸಾಕ್ಷಿಯ ಹೆಸರು | : ಎಂ ನಾಗರಾಜ | ಸಿ.ಡಬ್ಲ್ಯು 1 |
| ತಂದೆಯ ಹೆಸರು | : ಮಲ್ಲಪ್ಪ | ಪಿ.ಡಬ್ಲ್ಯು 2 |
| ವಯಸ್ಸು | : 63 ವರ್ಷ | |
| ಉದ್ಯೋಗ | : ನಿವೃತ್ತ ಅಬಕಾರಿ ನಿರೀಕ್ಷಕರು | |
| ವಾಸ ಸ್ಥಳ | : ಬೆಂಗಳೂರು | |

ದಿನಾಂಕ:09.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

1. ನಾನು ದಿನಾಂಕ 05-08-2019 ರಿಂದ ದಿನಾಂಕ 30-06-2023 ರವರೆಗೆ ಚಿಕ್ಕಮಗಳೂರು ಉಪ ವಿಭಾಗ ಕಛೇರಿಯಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದಲ್ಲಿ ದಿನಾಂಕ 15.04.2023 ರಂದು ನಾನು ಕರ್ನಾಟಕ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ ಪ್ರಯುಕ್ತ ನಮ್ಮ ಸಿಬ್ಬಂದಿಗಳೊಂದಿಗೆ ತರೀಕೆರೆ ತಾಲ್ಲೂಕಿನ ಎಂ.ರಂಗಾಪುರದಿಂದ ಇಟ್ಟಿಗೆ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಸಂಜೆ 5.30 ಗಂಟೆಗೆ ಅಭಕಾರಿ ಗಸ್ತು ಮಾಡುತ್ತಿದ್ದಾಗ ನನಗೆ ಬಂದ ಮಾಹಿತಿ ಏನೆಂದರೆ ಒಬ್ಬ ವ್ಯಕ್ತಿಯು ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಟ ಆಗುತ್ತಿದ್ದಾನೆ ಎಂಬ ಮಾಹಿತಿ ಬಂದಿತು, ಕಾರಣ ನಾನು ಸ್ಥಳೀಯರನ್ನು ಕರೆದು ಮಾಹಿತಿಯ ಬಗ್ಗೆ ತಿಳಿಸಿ ದಾಳಿಗೆ ಸಹಕರಿಸಲು ಕೋರಿದ್ದು, ಯಾರೂ ಸಹ ದಾಳಿಗೆ ಸಹಕರಿಸಲು ಮುಂದೆ ಬರದೇ ಇದ್ದುದ್ದಕ್ಕಾಗಿ ವಾಹನದಲ್ಲಿ ಸಿಬ್ಬಂದಿಯಾದ ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಮಾಡಿಕೊಂಡು ಸ್ಥಳಕ್ಕೆ ಹೋಗಿ ರಸ್ತೆ ಕಾವಲು ಮಾಡುತ್ತಾ ನಿಂತಿದ್ದೆವು. ಆ ಸಮಯಕ್ಕೆ ಒಬ್ಬ ವ್ಯಕ್ತಿಯು ಒಂದು ಟಿ ಸಿ ಎಸ್ ಕಂಪನಿಯ ದ್ವಿಚಕ್ರದ ವಾಹನದ ಮೇಲೆ ಚೀಲದಲ್ಲಿ ಯಾವುದೋ ವಸ್ತುಗಳನ್ನು ಇಟ್ಟುಕೊಂಡು ಬರುತ್ತಿರುವುದನ್ನು ಕಂಡು ಅನುಮಾನದಿಂದ ವಾಹನವನ್ನು ತಡೆದು ನಿಲ್ಲಿಸಲು ಪ್ರಯತ್ನ ಮಾಡಿದೆವು. ಆದರೆ ವ್ಯಕ್ತಿಯು ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋದನು. ವಾಹನವನ್ನು ಪರಿಶೀಲಿಸಿದಾಗ ಅದಕ್ಕೆ ನೋದಂಣಿ ನಂಬರ್ ಇರಲಿಲ್ಲ. ಚೀಲದಲ್ಲಿ 90 ಮಿ.ಲೀ.ಯ ಸೂಪರ್ ಪವರ್ ಪ್ರೀಮಿಯಂ ವಿಸ್ಕಿ ಹೆಸರಿನ 144 ಪೌಚುಗಳು ಇದ್ದವು. ನಾನು ಸದರಿ ಮದ್ಯವನ್ನು ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದೆ ಎಂದು ತಿಳಿದ ಕಾರಣ ಅದನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ ತಮ್ಮ ವಶಕ್ಕೆ ಪಡೆದುಕೊಂಡೆನು. ಅದಕ್ಕೆ

ಪಂಚರು ಸಹಿ ಮಾಡಿದ ಚೀಟಿಯನ್ನು ಅಂಟಿಸಿ ಸೀಲು ಮಾಡಿರುತ್ತೇನೆ. ನಂತರ ನಾನು ಮುದ್ದೆ ಮಾಲು ಮತ್ತು ವಾಹನವನ್ನು ಠಾಣೆಗೆ ತಂದು ಸ್ವ ಪಿರ್ಯಾದಿಯನ್ನು ತಯಾರಿಸಿ ಅದರ ಮತ್ತು ಪಂಚನಾಮೆ ಆಧಾರದ ಮೇಲೆ ಆರೋಪಿಯ ವಿರುದ್ದ ಮೊ. ಸಂಖ್ಯೆ 49/2022-23 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ರೀತಿ ದಿಃ 25-4-2023 ನಾನು ರಾಸಾಯನಿಕ ಪರೀಕ್ಷೆಗಾಗಿ ಮುದ್ದೆ ಮಾಲನ್ನು ಚಾಸಾ-3 ರವರ ಮೂಲಕ ಎಪ. ಎಸ್ ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಪ್ರಾದೇಶಿ ಸಾರಿಗೆ ಅಧಿಕಾರಿ, ತರೀಕೆರೆ ರವರಿಗೆ ವಾಹನದ ಮಾಲೀಕತ್ವದ ಬಗ್ಗ ಮಾಹಿತಿ ಕೋರಿ ಪತ್ರ ಬರೆದಿರುತ್ತೇನೆ. ಅದೇ ದಿನ ಚಾಸಾ-2 ಮತ್ತು 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-6 ರವರಿಗೆ ವಹಿಸಿಕೊಟ್ಟಿರುತ್ತೇನೆ.

3. ನಿಪಿ.1 ದಾಖಲೆಯು ನಾನು ಜರುಗಿಸಿದ್ದ ಪಂಚನಾಮೆಯಾಗಿದ್ದು ಅದರ ಮೇಲಿರುವ ನನ್ನ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು

4. ನಿಪಿ.2 ಮತ್ತು 3 ಫೋಟೋಗಳು ನಾನು ಪಂಚನಾಮೆ ಕಾಲದಲ್ಲಿ ತೆಗೆದುಕೊಂಡ ಫೋಟೊಗಳಾಗಿದ್ದು ಅವುಗಳ ಮೇಲಿರುವ ನನ್ನ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು.

5. ನಾನು ದಾಖಲಿಸಿದ ಪಿರ್ಯಾದಿಯನ್ನು ನಿಪಿ.4 ಹಾಗೂಗ ಅದರ ಮೇಲಿರುವ ನನ್ನ ಸಹಿಯನ್ನು ನಿಪಿ.4 ಎ ಎಂದು ಗುರುತಿಸಲಾಯಿತು

6. ನಾನು ದಾಖಲಿಸಿಕೊಂಡ ಪ್ರ.ವ.ವರದಿಯನ್ನು ನಿಪಿ.5 ಹಾಗೂ ಅದರ ಮೇಲಿರುವ ನನ್ನ ಸಹಿಯನ್ನು ನಿಪಿ.5 ಎ ಎಂದು ಗುರುತಿಸಲಾಯಿತು

7. ನಾನು ರಾಸಾಯನಿಕ ಪರೀಕ್ಷೆಗಾಗಿ ಮು.ಮಾಲನ್ನು ಕಳುಹಿಸಿಕೊಟ್ಟು ಬರೆದ ಪತ್ರವನ್ನು ನಿಪಿ.6 ಹಾಗೂ ಅದರ ಮೇಲಿರುವ ನನ್ನ ಸಹಿಯನ್ನು ನಿಪಿ.6 ಎ ಎಂದು ಗುರುತಿಸಲಾಯಿತು.

8. ನಾನು ಪ್ರಾದೇಶಿಕ ಸಾರಿಗೆ ಕಛೇರಿಗೆ ಬರೆದ ಪತ್ರವನ್ನು ನಿಪಿ.7 ಹಾಗೂ ಅದರ ಮೇಲಿರುವ ನನ್ನ ಸಹಿಯನ್ನು ನಿಪಿ.7 ಎ ಎಂದು ಗುರುತಿಸಲಾಯಿತು.

9. ಈಗ ನ್ಯಾಯಲಯದ ಮುಂದೆ ಇರುವ ವ್ಯಕ್ತಿಯು ಅ ದಿನ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿದ್ದ ಮತ್ತು ಸ್ಥಳದಿಂದ ಓಡಿ ಹೋದ ವ್ಯಕ್ತಿಯಾಗಿರುತ್ತಾನೆ.

10. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಪೌಚುಗಳು ನಾನು ಆರೋಪಿಯ ವಶದಿದ ಅಮಾನತುಪಡಿಸಿಕೊಂಡ ಮದ್ಯದ ಪೌಚುಗಳು ಆಗಿರುತ್ತವೆ.

ಸಿಸಿ ನಂಬರ್.213/2024

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

11. ನಾನು ಬಾತ್ಮಿ ಬಂದ ಸ್ಥಳಕ್ಕೆ ಹೋದಾಗ ಸಮಯ ಸಂಜೆ 5.30 ಗಂಟೆಯಾಗಿತ್ತು. ರಂಗಾಪುರ – ಇಟ್ಟಿಗೆ ರಸ್ತೆಯಲ್ಲಿ ಸಾಮಾನ್ಯವಾಗಿ ಜನದಟ್ಟಣೆ ಇರುತ್ತದೆ ಎಂದರೆ ಕಡಿಮೆ ಪ್ರಮಾಣದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯು ಓಡಾಡಲು ಶಕ್ತಿ ಇಲ್ಲದೇ ಇರುವಂತಹ ವ್ಯಕ್ತಿಯಾಗಿರುತ್ತಾನೆ ಎಂದರೆ ಸರಿಯಲ್ಲ. ಹಾಗಾಗಿ ಆರೋಪಿಯು ಸ್ಥಳದಲ್ಲಿ ಹಾಜರಿದ್ದನು ಮತ್ತು ನಮ್ಮನ್ನು ನೋಡಿ ಓಡಿ ಹೋದನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಮಾನತುಪಡಿಸಿಕೊಂಡ ಪೌಚುಗಳ ಮೇಲೆ ಯಾವುದೇ ಲೇಬಲ್ ಇರಲಿಲ್ಲ ಆದರೆ ಕಂಪನಿ ಹೆಸರು ಮಾತ್ರ ಬರೆಯಲಾಗಿತ್ತು. ಅದರ ಮೇಲೆ ಬ್ಯಾಚ್ ನಂಬರ ಇರಲಿಲ್ಲ.

12. ನಾನು ಯಾವುದೇ ಸ್ಥಳಕ್ಕೆಹೋಗಿರುವುದಿಲ್ಲ , ಆರೋಪಿಯನ್ನು ನೋಡಿರುವುದಿಲ್ಲ , ಆತನ ವಶದಿಂದ ಮುದ್ದೆ ಮಾಲನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮಾಲಿಗೂ ಮತ್ತು ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅವರು ವಾಹನದ ಮಾಲೀಕರು ಎಂಬ ಕಾರಣಕ್ಕೆ ಮಾತ್ರ ಅವರ ಮೇಲೆ ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಕಛೇರಿಯ ಅಂಖ್ಯೆ-ಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ಹಾಕಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.